ಡಾ ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ

Dr. Manmohan Singh
Bengaluru City University

BE BOUNDLESS

"ಜ್ಞಾನಜ್ಯೋತಿ-ಸೆಂಟ್ರಲ್ ಕಾಲೇಜ್ ಕ್ಯಾಂಪಸ್" ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು- 560001.

E-Mail ID: registrar@bcu.ac.in

ಸಂಖ್ಯೆ:ಬಿ.ಸಿ.ಯು/ಶೈಕ್ಷಣಿಕ/ಸಂಯೋಜನೆ/03/2025-26

ದಿನಾಂಕ: 04.12.2025

## ಸಂಯೋಜನೆಗಾಗಿ ಪರಿಷ್ಕೃತ ಅಧಿಸೂಚನೆ

ವಿಶ್ವವಿದ್ಯಾನಿಲಯದ ಅಧಿಸೂಚನೆ ದಿನಾಂಕ: 06.11.2025 ಮತ್ತು ದಿನಾಂಕ 29.11.2025 ರಂದು ಹೊರಡಿಸಿದ ಪರಿಷ್ಕೃತ ಅಧಿಸೂಚನೆಯನ್ನು ಮುಂದುವರೆಸುತ್ತಾ, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಕಾಲೇಜುಗಳು/ಶೈಕ್ಷಣಿಕ ಸಂಸ್ಥೆಗಳಿಂದ ಕರ್ನಾಟಕ ವಿಶ್ವವಿದ್ಯಾನಿಲಯ ಕಾಯ್ದೆ 2000ರ ಪ್ರಕರಣ 59 ಮತ್ತು 62ರ ಅಡಿಯಲ್ಲಿ, 2026-27ನೇ ಶೈಕ್ಷಣಿಕ ಸಾಲಿನ ವಿವಿಧ ಸಂಯೋಜನೆಗಳಿಗಾಗಿ ದಂಡ ಶುಲ್ಕವಿಲ್ಲದೆ ಅರ್ಜಿಗಳನ್ನು ಸಲ್ಲಿಸಲು ದಿನಾಂಕ 06.12.2025 ನಿಗದಿಪಡಿಸಿ, ರೂ. 13,310/- ದಂಡ ಶುಲ್ಕದೊಂದಿಗೆ ಕೊನೆಯ ದಿನಾಂಕ 11.12.2025 ರಂದು ನಿಗದಿಪಡಿಸಲಾಗಿತ್ತು.

ತಾಂತ್ರಿಕ ಕಾರಣಗಳಿಂದಾಗಿ ಕೆಲವು ಕಾಲೇಜುಗಳಿಗೆ ಯು.ಯು.ಸಿ.ಎಂ.ಎಸ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಸಮಸ್ಯೆಗಳು ಕಂಡುಬಂದ ಹಿನ್ನೆಲೆಯಲ್ಲಿ ಸಂಯೋಜನಾ ಅರ್ಜಿಗಳನ್ನು ದಂಡ ಶುಲ್ಕವಿಲ್ಲದೆ ಸಲ್ಲಿಸಲು ಕೊನೆಯ ದಿನಾಂಕವನ್ನು **12.12.2025** ರವರೆಗೆ ಮತ್ತು ರೂ.13,310/- ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು **18.12.2025** ರವರೆಗೆ ವಿಸ್ತರಿಸಲಾಗಿದೆ. ನಿಗದಿತ ದಿನಾಂಕದೊಳಗೆ ಆನ್‌ಲೈನ್ ಮೂಲಕ ಶುಲ್ಕ ಪಾವತಿಸಿ, ಅರ್ಜಿ ಸಲ್ಲಿಸಿ ಅದರ 3 ಭೌತಿಕ ಪ್ರತಿಗಳನ್ನು ದಿನಾಂಕ: 19.12.2025ರ ಒಳಗಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಈ ಮೂಲಕ ಎಲ್ಲಾ ಮಹಾವಿದ್ಯಾಲಯಗಳಿಗೆ ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಹಾಗೂ ಹೊಸ ಕೋರ್ಸುಗಳ ವಿವರಗಳನ್ನು **www.bcu.ac.in** ಜಾಲತಾಣದಲ್ಲಿ ಪ್ರಕಟಿಸಿರುವ ಅಧಿಸೂಚನೆಗಳಲ್ಲಿ ವೀಕ್ಷಿಸಬಹುದಾಗಿದೆ.

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಆವರಣ
ಬೆಂಗಳೂರು - 560 001

Scanned with OKEN Scanner